ಮೈಸೂರ ಗೆಜೆಟ್ಟ

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಮೇ ತಾ 10, ಸ್ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬ್ಯೈ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ

ಇಂಡ್ಯೂಗವರ್ನ್‌ಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್ಗಿರುವರ್ಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ನಂ. 2. ತಾರೀಖು 1ನೇ ಮೇ 1884.

ಸಮಸ್ತ ಜನಗಳ ತಿಳುವಳಿಕೆ ಬ್ಯೈ ಇದರಿಂದ ಪ್ರಕಟಪಡಿಸುವದೇನಂದರೆ, ಇನ್ನು ಮೇಲೆ ಬ್ರಿಟಿಷ್ ಇಂಡ್ಯದೇಶದಿಂದ ಮೈಸೂರು ದೇಶಕ್ಕೆ ಆಯುಧ ವ ಯುದ್ಧ ಸಾಮಗ್ರಿಗಳನ್ನು ರಫ್ತು ಮಾಡುವದಕ್ಕೋಸ್ಕರ ಲೈಸೆನ್ಸ್ ಬ್ಯೈ ಮೈಸೂರು ದೇಶದ ರೆಸಿಡೆಂಟರವರಿಗೆ ಬರೆಯಲ್ಪಡುವ ದರಖಾಸ್ತುಗಳು, ಇದುವರಿಗೆ ಜಾರೀಲಿಯಿದಂತೆ ಮೈಸೂರು ಛಾಪಾ ಕಾಗದದ ಮೇಲೆ ಬರೆಯುವದಕ್ಕೆ ಬದಲಾಗಿ, ಬ್ರಿಟಿಷ್ ಇಂಡ್ಯದೇಶದ ಐದು ರೂಪಾಯಿಗಳ ಬೆಲೆಯುಳ್ಳ ಛಾಪಾ ಕಾಗದ್ದ ಮೇಲೆ ಬರೆಯಲ್ಪಡತಕ್ಕದ್ದು.

2. ಪ್ರತಿ ದರಖಾಸ್ತಿನ ಸಂಗಡಲೂ, ಆಯುಧ ಯಾ ಯುದ್ಧ ಸಾಮಗ್ರಿಗಳು ಮೈಸೂರು ದೇಶದ ಯಾವ ಡಿಸ್ಟ್ರಿಕ್ಟಿಗೆ ಆಮದ್ ಮಾಡಲ್ಪಡತಕ್ಕದ್ದೋ ಆ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಂದ, ದರಖಾಸ್ತುದಾರನ ಖಾಯಿಷ್ ಪ್ರಕಾರ ಲೈಸೆನ್ಸ್ ಕೊಡುವ ಬಗ್ಗೆ ಹರಕತ್ತಿಲ್ಲ ವೆಂಬದಾಗಿ ನಮೂದ್ ಮಾಡಲ್ಪಟ್ಟ ಬಂದು ಲೆಟರ್ ಯಾ ಸರ್ಟಿಫಿಕೇಟ್ ಆಗಲಿ ಇಳುಹಿಸಲ್ಪಡತಕ್ಕದ್ದು.

ಹುಕ್ಕುಂ ಬಮೋಜೇಬ,
ಸೆಬ್. ವೈಲಿ, ಮೇಜರ್,
ರೆಸಿಡೆಂಟರ ಅಸಿಸ್ಟೆಂಟ್.

ರೆವಿನ್ಯೂ ಸರ್ವೇ ಮತ್ತು ಸೆಟಲ್‌ಮೆಂಟ್ ಇಲಾಖಾ.

ನಂ. 50. ತಾರೀಖು 19ನೇ ಏಪ್ರೆಲ್ 1884.

ಸಮಸ್ತ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮಾಜಿ ಅರಕಲ್‌ಗೂಡು ತಾಲ್ಲೂಕಿನ ಭಾಗವಾಗಿದ್ದು ಈಚಿಗೆ ಮೈಸೂರು ಡಿಸ್ಟ್ರಿಕ್ಟಿನ ಯಡತೊರೆ ತಾಲ್ಲೂಕಿಗೆ ವರ್ಗವಾಡಲ್ಪಟ್ಟಿರುವ 78 ಸರಕಾರೀ ಗ್ರಾಮಗಳ ರಿವಿನ್ಯೂ ಸರ್ವೆ ಜಮಾಬಂದಿಯು, 1884ನೇ ಇಸವಿ ಮೇ ಗುರ್ಯಿಗೆ, ಯಾ ಆ ಸುಮಾರಿಗೆ ಪ್ರಾರಂಭಿಸಲ್ಪಡುತ್ತೆ.